(ಶ್ರೀ ಆಲೂರು ಹನುಮಂತಪ್ಪ)

ರಾಗುತ್ತದೆ. ಅದರ ಖರ್ಚು 5,90,000 ರೂಪಾಯಿ ಆಗುತ್ತದೆ. ಇದರಿಂದ 1421 ಎಕರೆಗೆ ಅನುಕೂಲವಾಗುತ್ತದೆ. ಕಬ್ಬಳ್ಳದಲ್ಲಿ ಒಂದು ಲಫ್ಟ್ ಇರಿಗೇಷನ್ ಸ್ಕೀಮ್ ಆಗತಕ್ಕ ಅವಕಾಶವಿದೆ. ಅದರ ಅಂದಾಜು 82 ಸಾವಿರ ರೂಪಾಯಿಗಳಾಗುತ್ತದೆ. 200 ಎಕರೆಗೆ ಅನುಕೂಲವಾಗುತ್ತದೆ. ಈ ರೀತಿಯಾಗಿ 4–5 ನದಿಗಳಿಗೆ ಯೋಜನೆಗಳು ಸಿದ್ಧವಾಗುತ್ತಿವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ 18 ಯೋಜನೆಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದೆ. ಅವನ್ನು ಯಾವಾಗ ಮಂಜೂರು ಮಾಡುತ್ತಾರೆ? ಇದರಿಂದ ನೀರಾವರಿಯಾಗತಕ್ಕ ಭೂಮಿ ಎಷ್ಟು?

ಶ್ರೀ ಆಲೂರು ಹನುಮಂತಪ್ಪ.—ನೀರಾವರಿಯಾಗತಕ್ಕ ಭೂಮಿ ಅಂದಾಜು ಮಾಡಿ ಎಂದು ಹೇಳಿದ್ದೇವೆ. ಅದರಲ್ಲಿ ಎಷ್ಟು ಮಂಜೂರು ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕಾದರೆ ಎಸ್ಟಿಮೇಟ್ಸ್ ಫೈನಲೈಜ್ ಆಗಬೇಕಾಗಿವೆ. ಆದಷ್ಟು ಬೇಗ ಲಫ್ಟ್ ಇರಿಗೇಷನ್ ಸ್ಕೀಮುಗಳನ್ನು ಜರೂರಾಗಿ ಮಾಡಬೇಕೆಂದು ಸರ್ಕಾರದವರು ಆದೇಶವನ್ನು ಕಳುಹಿಸಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಇರತಕ್ಕ ಡ್ರೈ ಏರಿಯಾಗಳಿಗೆ ಹೆಚ್ಚು ನೀರು ಬರುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹಿಂದೆ ಹೇಳಿದ್ದರು. ಈಗ ಹಾಸನ ಮತ್ತು ಅರಕಲಗೂಡು ತಾಲ್ಲೂಕುಗಳು ಡ್ರೈ ಏರಿಯಾ ಆಗಿರುವುದರಿಂದ ಆ ವಿಚಾರವನ್ನು ತಮ್ಮ ಗಮನದಲ್ಲಿಟ್ಟುಕೊಂಡು ಈಗಲಾದರೂ ಸಾಧ್ಯವಾದಷ್ಟು ಅಂದಾಜುಗಳನ್ನು ರಿವೈಸ್ ಮಾಡಿ ಆ ಡ್ರೈ ಏರಿಯಾಗಳಿಗೆ ಹೆಚ್ಚು ನೀರು ಬರುವ ಹಾಗೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಹಾಸನ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸಾಧ್ಯವಾಗುತ್ತದೋ, ಯಾವ್ಯಾವ ಕಡೆಗಳಲ್ಲಿ ಅನುಕೂಲವಾಗಿ ಇರುತ್ತದೋ, ಅಂತಹ ಕಡೆಗಳಲ್ಲಿ ಅವಶ್ಯಕವಿದ್ದರೆ ನೀರನ್ನು ಒದಗಿಸಲು ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಹಾಸನ ಜಿಲ್ಲೆ ಬಹಳ ಅಭಾವ ಪ್ರದೇಶವೆಂದು ಮಂತ್ರಿ ಮಂಡಲದಲ್ಲಿಯೇ ಹಿಂದೆ ಒಂದು ಸಾರಿ ತೀರ್ಮಾನ ಮಾಡಿರುವ ಪ್ರಕಾರ ಹಾಸನದ ತಾಲ್ಲೂಕು ಬೋರ್ಡ್ ಮುಖಾಂತರ ಅಲ್ಲಿ 67 ಯೋಜನೆಗಳಿಗೆ ಅಂದಾಜು ತಯಾರು ಮಾಡಿದ್ದಾರೆಂದು ಹೇಳಿದರು. ಇವನ್ನು ಯಾವಾಗ ತಯಾರು ಮಾಡಿದ್ದಾರೆ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಕೆಲವು ಅಂದಾಜುಗಳಿಗೆ ಮಂಜೂರಾತಿ ದೊರೆತಿದೆ. ಈ ವಿಚಾರದಲ್ಲಿ ಏನು ಮಾಡಬೇಕೆಂಬ ಕುತೂಹಲ ಮಾನ್ಯ ಸದಸ್ಯರಿಗೆ ಇರುವ ಹಾಗೆ ಸರ್ಕಾರಕ್ಕೂ ಇದೆಯೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—18 ಯೋಜನೆಗಳ ಪೈಕಿ ಕೆಲವಕ್ಕೆ ಮಂಜೂರಾತಿ ದೊರಕಿದೆ. ಮತ್ತೆ ಕೆಲವಕ್ಕೆ ಇಲ್ಲವೆಂದು ಹೇಳಿದರು. ಒಂದು ವೇಳೆ ಮಂಜೂರಾತಿ ದೊರೆಯದೇ ಇದ್ದರೆ, ಪ್ರಯಾರಿಟಿ ನಿಗದಿ ಮಾಡಿ ಸರ್ಕಾರದವರು ಫೀಜಿಬಿಲಿಟಿ ವರದಿಯನ್ನು ಏನಾದರೂ ಆ ಬಗ್ಗೆ ತಯಾರು ಮಾಡಿದ್ದಾರೆಯೇ?

ಶ್ರೀ ಆಲೂರು ಹನುಮಂತಪ್ಪ.—ಈ 18 ಯೋಜನೆಗಳ ಪೈಕಿ ಕೆಲವಕ್ಕೆ ಅಂದಾಜು ಸಿದ್ಧವಾಗುತ್ತಿದೆ, ಮಂಜೂರಾತಿಯೂ ಸಿಗುತ್ತದೆ. ಯಾವುದು ಪ್ರಾಮುಖ್ಯವೋ ಅದನ್ನು ಜಾಗ್ರತೆಯಾಗಿ ಮಾಡುತ್ತಾರೆ.

Lift Irrigation Schemes sanctioned to the State

*Q.—515. Sri R. S. HEGDE (Honnavar).—

Will the Government be pleased to state :—

(*a*) how do the Government propose to distribute the Thirty-one Lift Irrigation Schemes sanctioned to the State by the Centre ;

(*b*) what is the time limit to fully implement the Scheme ?

A.—Sri ALUR HANUMANTHAPPA (Deputy Minister for Minor Irrigation).—

(*a*) *Vide* Statement appended.

(*b*) Two years *i.e.*, till the end of financial year 1966-67.

statement showing the List Irrigation Schemes.

Name of State : MYSORE

Sl. No.	Name of Scheme	Total Cost
1	2	3
		Rs.
1	Lift Irrigation Scheme at M. K. Hubli, Bailhongal Taluk, Belgaum District.	1,02,100
2	Lift Irrigation Scheme at Jaknur Village, Badami Taluk, Bijapur District.	92,000
3	Lift Irrigation Scheme at Sankalkariya, Elinja village, Mangalore Taluk.	99,000
4	Lift Irrigation Scheme at Nanchar, Udipi Taluk, South Kanara District.	2,63,000
5	Lift Irrigation Scheme at Irmadi, Udipi Taluk, South Kanara District.	76,000
6	Lift Irrigation Scheme at Muggeri, Haveri village, Udipi Taluk, South Kanara District.	87,000
7	Lift Irrigation Scheme at Herga, Udipi Taluk, South Kanara District.	1,34,000
8	Lift Irrigation Scheme at Parappu, Kadala village, Puttur Taluk.	73,000
9	Lift Irrigation Scheme at Idyadi, Savanoor village, Puttur Taluk.	65.000
10	Lift Irrigation Scheme at Surve, Puttur Taluk, South Kanara District.	57,000
11	Lift Irrigation Scheme at Dodderi downstream of Ajjaverur, Puttur Taluk.	30,000
12	Lift Irrigation Scheme at Mannur village, Buntwal Taluk, South Kanara District.	1,18,000
13	Lift Irrigation Scheme at Kariyathalgundi, Ulapady village, Mangalore Taluk.	1,40,500
14	Lift Irrigation Scheme at Dodderi upstream of Ajjavara, Puttur Taluk.	27,000
15	Lift Irrigation Scheme at Mantagani, Haveri Taluk, Dharwar District.	2,33,000
16	Lift Irrigation Scheme at Kunnimelli Halli, Shiggoan Taluk, Dharwar District.	1,40,200

(SRI ALUR HANUMANTHAPPA)

1	2	3
		Rs.
17	Lift Irrigation Scheme at Seshagiri village, Hangal Taluk, Dharwar District.	3,23,000
18	Lift Irrigation Scheme near Kitnur, Mallapura Taluk, Bellary District.	1,17,600
19	Lift Irrigation Scheme near Parwatabad village, Gulbarga District.	79,000
20	Lift Irrigation Scheme near Gowripura village, Harapanahalli Taluk.	70,000
21	Lift Irrigation Scheme near Rameshwarabundi, Mallapur Taluk, Bellary District.	1,55,000
22	Lift Irrigation Scheme Gajjapur Village, Harapanahalli Taluk, Bellary District.	60,000
23	Lift Irrigation Scheme Hunkunti village, Koppal Taluk, Raichur District.	1,54,000
24	Lift Irrigation Scheme near Seshagiri Village, Afzalpur Taluk, Gulbarga District.	2,26,400
25	Lift Irrigation Scheme near Mathur village, (T. B. Reservoir), Koppal Taluk.	1,46,000
26	Lift Irrigation Scheme near Tigri Village, (T. B. Reservoir), Koppal Taluk, Raichur District.	2,05,000
27	Lift Irrigation Scheme at Katarki (Gundalur) Koppal Taluk, Raichur District.	2,30,000
28	Lift Irrigation Scheme near Bannigola village, Mallapur Taluk, Bellary District.	1,20,000
29	Lift Irrigation Scheme near Yadgir village on R. B. of Bhima River, Gulbarga District.	1,67,000
30	Lift Irrigation Scheme at Tawargundi village, Bellary District.	80,000
31	Lift Irrigation Scheme at Nilogi village, Jewargi Taluk, Gulbarga District.	2,34,000
	Total	41,03,800

Sri R. S. HEGDE.—What is the basis for distribution of these schemes ?

† Sri ALUR HANUMANTHAPPA.—The basis is to take the schemes on top priority basis as crash programmes. In almost all the Districts the Government is very keen in taking up the lift Irrigation schemes that are sanctioned. We got only 31 schemes sanctioned. Out of 31 schemes some will be taken up in North Kanara. While finalising the final list of Schemes that are to be taken up, we will see that all the Districts will be taken into consideration for selecting the schemes.

Sri R. S. HEGDE.—What is the rate of investment for each scheme that is contemplated ?

Sri ALUR HANUMANTHAPPA.—There is some stipulation. The cost should not exceed Rs. 300 per acre and the working expenses not to exceed Rs. 40 per acre and also that the lift is not to exceed 50'. The Government has felt that there is immediate need to take up theseschemes. I have also told on more than one occasion that a decision is taken to take up the lift irrigation schemes on no profit no loss basis. In almost all the Districts the second list of Lift Irrigation Schemes is prepared and they are likely to be taken up.

Sri C. J. MUCKANNAPPA.—In Tumkur District how many out of 31 Schemes are to be sanctioned ?

Sri ALUR HANUMANTHAPPA.—In these 31 schemes, Tumkur District is not included. Out of 112 schemes that were submitted to Government of India, only 31 schemes have been selected. We are requesting the Government of India to be more liberal in selecting the schemes. It is hoped the rest of the schemes may be sanctioned very early.

ಶ್ರೀ ಸಿದ್ದಯ್ಯ ಕಾಶೀಮಠ್.—ಧಾರವಾಡ ಜಿಲ್ಲೆಯ ಹಾವೇರಿ ಮತ್ತು ಹಾನಗಲ್ ತಾಲ್ಲೂಕ್ ಗಳಿಗೆ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಮಂಜೂರು ಮಾಡಿದ್ದಾರೆ. ಇವುಗಳಿಗೆ ಅಂದಾಜನ್ನು ಸಿದ್ಧಗೊಳಿಸದೇ ಇರುವುದರಿಂದ ಕೇವಲ ಎರಡು ವರ್ಷಗಳಲ್ಲಿ ತ್ವರಿತವಾಗಿ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಅಂದಾಜು ಸಿದ್ಧವಾಗಿರತಕ್ಕ ಯೋಜನೆಗಳನ್ನು ಆದಷ್ಟು ಬೇಗ ಪೂರ್ತಿಮಾಡಬೇಕೆಂದು ತೀರ್ಮಾನಮಾಡಿದ್ದೇವೆ. ಲಿಫ್ಟ್ ಇರಿಗೇಷನ್ ಸ್ಕೀಮುಗಳಿಗೆ ಅಂದಾಜುಗಳ ಅಭಾವವಿಲ್ಲ. ಈಗಾಗಲೇ ಇಡೀ ದೇಶದ ಎಲ್ಲಾ ಜಿಲ್ಲೆಗಳಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮುಗಳ ಯೋಜನೆ ಇದೆ. ನನ್ನ ಮನಸ್ಸಿನಲ್ಲಿ ಸುಮಾರು 269 ಲಿಫ್ಟ್ ಇರಿಗೇಷನ್ ಸ್ಕೀಮುಗಳು ಒಟ್ಟು ಇವೆಯೆಂದು ಹೇಳಬಹುದು. ಅದರ ವಿವರ ಇಲ್ಲಿ ಹೇಳಬೇಕಾದರೆ ಬಹಳ ಉದ್ದವಾಗುತ್ತದೆ. ಮೂರು ಕೋಟಿ 49 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ 269 ಯೋಜನೆಗಳು ಈಗಾಗಲೇ ಹಂತಹಂತವಾಗಿ ಸಿದ್ಧವಾಗುತ್ತಿವೆ.

ಶ್ರೀ ಗೋಪಾಲರಾವ್ ಮುಡಬಿ.—ಪೊನ್ನೆ ತಾನೆ ಬದರ್ ಜೆಲ್ಲೆಯಲ್ಲಿ 10 ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ಹೇಳಿದ್ದರೂ, ಈ ಮುವ್ವತ್ತೊಂದು ಯೋಜನೆಗಳಲ್ಲಿ ಯಾವುದೂ ಕಾಣುತ್ತಾ ಇಲ್ಲ, ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಈ 31 ಯೋಜನೆಗಳಿರತಕ್ಕ ಪಟ್ಟಿಯಲ್ಲಿ ಅಲ್ಲಿಗೆ ಸಂಬಂಧ ಪಟ್ಟುದು ಯಾವುದೂ ಇಲ್ಲದಿದ್ದರೆ ಎರಡನೆಯ ಪಟ್ಟಿಯಲ್ಲಿ ಬರುತ್ತದೆ. ಈ 31 ಯೋಜನೆಗಳು ಇನ್ನೂ ಕಾರ್ಯಗತವಾಗುತ್ತಿವೆ. ಆದರೆ ಅದಕ್ಕೆ ಸಂಬಂಧಪಟ್ಟ ಪೈಪ್ಸ್ ಮತ್ತು ಮೋಟಾರು ನರಬರಾಜು ಗೋಸ್ಕರ ಚೀಫ್ ಎಂಜನಿಯರ್ ಅವರು ಒಂದು ಆರ್ಡರನ್ನು ಪ್ಲೇಸ್ ಮಾಡಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರು ಎಲೆಕ್ಟ್ರಿಕ್ ಲೈನುಗಳನ್ನು ಆ ಸ್ಥಳಕ್ಕೆ ಹತ್ತಿರದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಜೂನ್ ತಿಂಗಳೊಳಗೆ ಕೆಲವು ಯೋಜನೆಗಳನ್ನು ಆರಂಭ ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಪದೇ ಪದೇ ತುಮಕೂರು ಜಿಲ್ಲಾ ಪರಿಸ್ಥಿತಿ ಈಡಾಗುತ್ತಿರುವುದರಿಂದ ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ತೆಗೆದುಕೊಳ್ಳಲು ಅಂದಾಜುಗಳು ತಯಾರಾಗಿದ್ದರೂ ಇದುವರೆಗೆ ಆ ಯೋಜನೆಗಳನ್ನು ಅಲ್ಲಿ ತೆಗೆದುಕೊಳ್ಳದೇ ಇರುವುದಕ್ಕೆ ಪ್ರಬಲವಾದ ಕಾರಣವಾದರೂ ಏನಿತ್ತು ? ಅದನ್ನು ಗಂಭೀರವಾದ ಸ್ಥಿತಿಯಲ್ಲಿ ಏನಾದರೂ ಬಗೆಹರಿಸಲು ತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕಾಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಲಿಫ್ಟ್ ಇರಿಗೇಷನ್ ಸ್ಕೀಮು ನಮ್ಮ ದೇಶಕ್ಕೆ ಹೊಸದು. ಈ ವಿಚಾರವನ್ನು ಅನೇಕರಾರಿ ಹೇಳಿದೆ. ಆದರೆ ಸರ್ಕಾರ ಎಲ್ಲಿಯೂ ಈ ಬಗ್ಗೆ ಹಿಂದಿರುಗಿದ ನಿದರ್ಶನಗಳಿಲ್ಲ. ಮೂರು ವರ್ಷಗಳಿಂದಲೂ ಈ ವಿಚಾರದಲ್ಲಿ ಭರವಸೆಗಳನ್ನು ಕೊಟ್ಟಿದೆ. ಇವತ್ತು ತುಮಕೂರು ಜಿಲ್ಲೆಯ ಜಯಮಂಗಲ ನದಿಗೆ ಬೇಕಾದಷ್ಟು ಲಿಫ್ಟ್ ಇರಿಗೇಷನ್ನು ಕೊಟ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾಗಿದೆ. ಸರ್ಕಾರದವರೇ ಈ ವಿಚಾರವಾಗಿ ಯೋಚನೆ ಮಾಡಿ ಆದಷ್ಟು ಬೇಗ ಇನ್ನೂ ಹೆಚ್ಚಿಗೆ ನೀರನ್ನು ಅಲ್ಲಿಗೆ ಒದಗಿಸಬೇಕಾದುದು ಬಹಳ ಪ್ರಾಮುಖ್ಯವೆಂದು ಈಗಾಗಲೇ ತಕ್ಕ ಕ್ರಮಗಳನ್ನು ಕೈಗೊಂಡಿದ್ದಾರೆ. ಮಾನ್ಯ ಸದಸ್ಯರಿಗೆ ಈ ಪ್ರಕಾರ ತೀವ್ರತೆಯಾಗಿದ್ದರೆ ಅದು ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆಯೆಂದು ಹೇಳಲು ನಾನು ಇಚ್ಛೆಪಡುತ್ತೇನೆ.

ಶ್ರೀ ಎ. ಹೆಚ್. ಪಾಟೀಲ್.—ಬಿಜಾಪುರ ಜಿಲ್ಲೆಯಲ್ಲಿ ಬಿದರೆ ಹತ್ತಿರ ಒಂದು ಲಿಫ್ಟ್ ಇರಿಗೇಷನ್ ಸ್ಕೀಮ್ ತಯಾರಾಗಿದೆ. ಇದು ಇನ್ನೂ ಮಂಜೂರು ಆಗದಿರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಏನು ಯಾವಾಗ ಎಂದು ಬರೆದರೆ ತಕ್ಷಣ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಚನ್ನಬ್ಯೈರೇಗೌಡ.—ಈಗ ಕೇಂದ್ರ ಸರ್ಕಾರಕ್ಕೆ ಕಳಿಸಿದ 112 ಯೋಜನೆಗಳಲ್ಲಿ 31 ಮಾತ್ರ ಮಂಜೂರು ಆಗಿವೆ. ಉಳಿದವುಗಳು ಏನಾಗಿವೆ, ಅವಕ್ಕೋಸ್ಕರ ಏನು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ನಮ್ಮ ಹಾಗೆಯೇ ಕೇಂದ್ರ ಸರ್ಕಾರಕ್ಕೂ, ಪ್ಲಾನಿಂಗ್ ಕಮಿಶನಿನವರಿಗೂ, ವ್ಯವಸಾಯ ಇರಾಖೆಯ ತಜ್ಞರಿಗೂ ಬಹಳ ತೀವ್ರತೆ ಇದೆ, ಅವರು ತೀವ್ರತೆಯಿಂದ ಪರಿಶೀಲನೆಯುತ್ತಿದ್ದಾರೆ. ಹೆಚ್ಚು ಹಣ ಕೊಡುತ್ತೇವೆ ಎಂದು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇದಕ್ಕಾಗಿ ಪ್ರಯತ್ನ ಮಾಡಿದ್ದಾರೆ. ಆದಷ್ಟು ಬೇಗ ಯೋಜನೆಗಳು ಮಂಜೂರಾತಿ ಪಡೆಯುತ್ತವೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಬಹಳ ಅಗತ್ಯತೆ ಇದೆ. ಆದರೆ ಕಾರ್ಕಳ ತಾಲೂಕಿನಲ್ಲಿ ಕೆಲವು ಎಸ್ಟಿಮೇಟ್ ಆದವುಗಳೂ ಕೂಡ ಇಲ್ಲಿ ಬಿಟ್ಟು ಹೋಗಿರಲು ಕಾರಣವೇನು, ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮೊನ್ನೆಯ 31 ಸ್ಕೀಮ್‌ಗಳು ಹೊಸಕಿ 12 ಸ್ಕೀಮ್‌ಗಳಿಗೆ 11 ಲಕ್ಷದ 66 ಸಾವಿರ ರೂಪಾಯಿಗಳಷ್ಟು ಸೌತ್ ಕೆನರಾ ಜಿಲ್ಲೆಗೆ ಮಂಜೂರಾತಿ ಕೊಟ್ಟಿದ್ದಾರೆ. ಇನ್ನೂ ಅನೇಕ ಯೋಜನೆಗಳು ಪರಿಶೀಲನೆಯುಲ್ಲಿವೆ. ಯಾವ ಯಾವ ತಾಲೂಕ್ ಬಿಟ್ಟು ಹೋಗಿವೆ, ಆದಕ್ಕೆ ಮುಂದೆ ಆದ್ಯತೆ ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನಲ್ಲಿ ಗುಡ್ಡನ ಹಳ್ಳಿ ಲಿಫ್ಟ್ ಇರಿಗೇಷನ್ ಸ್ಕೀಮನ್ನು ತಾವು ಕೂತ ನೋಡಿಕೊಂಡು ಬಂದಿದ್ದೀರಿ. ಈ 112 ಯೋಜನೆಗಳಲ್ಲಿ ಇದನ್ನು ಕೂಡ ಸೇರಿಸಿದ್ದೀರಾ ? ಕೇಂದ್ರ ಸರ್ಕಾರಕ್ಕೆ ಕಳಿಸಿದ ಪಟ್ಟಿಯಲ್ಲಿ ಇದನ್ನು ಸೇರಿಸಿದ್ದೀರಾ ? ಹಾಗಿದ್ದರೆ ಅದರ ಸ್ಥಿತಿ ಏನಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಈಗಾಗಲೇ ಹೇಳುವುದಕ್ಕಾಗುವುದಿಲ್ಲ. ಎಲ್ಲಿ ಎಲೆಕ್ಟ್ರಿಕ್ ಲೈನ್ ಹತ್ತಿರವಲ್ಲೇ ಇದೆಯೋ ಅಂಥ ಕಡೆಗಳಲ್ಲಿ ಯೋಜನೆಗಳನ್ನು ಮಾಡಿದರೆ ಆದಷ್ಟು ಬೇಗ ಕಾರ್ಯಗತ ಮಾಡುವುದಕ್ಕೆ ಸುಲಭವಾಗುತ್ತದೆಂದು ಸರ್ಕಾರದ ಇಚ್ಛೆ. ಮಾನ್ಯ ಸದಸ್ಯರು ಹೇಳಿದುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಮಾದಯ್ಯ ಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಅರ್ಕಾವತಿ ವ್ಯಾಲಿಯೊಳಗೆ ಒಂದು ಲಿಫ್ಟ್ ಇರಿಗೇತನ್ ಸ್ಕೀಮ್ ಮಾಡಬೇಕೆಂದು ಹೇಳಿ ಹೇಳಿ ಸಾಕಾಯಿತು. ಅಲ್ಲಿ ಎರ್ಲಾ ಸೌಕರ್ಯಗಳೂ ಕೂಡ ಇವೆ. ಇನ್ನಾದರೂ ಒಂದು ಸ್ಯಾಪಂರ್‌ಗಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಾ ?

ಶ್ರೀ ಆಲೂರು ಹನುಮಂತಪ್ಪ.—ಬೆಂಗಳೂರು ಜಿಲ್ಲೆಗೆ ಸಂಬಂಧಪಟ್ಟ ಸುಮಾರು 8 ಲಕ್ಷ ರೂಪಾಯಿಯ ಯೋಜನೆಗಳು ಈಗಾಗಲೇ ಸಿದ್ಧವಾಗಿದೆ. ಅದನ್ನು ಎರಡನೆಯ ಲಸ್ಟ್ ಮಂಜೂರು ಮಾಡತಕ್ಕ ಸಮಯದಲ್ಲಿ ಗಮನಪಲ್ಲಿಟ್ಟುಕೊಂಡು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಕೆಲವು ಯೋಜನೆಗಳಿಗೆ ಸೆಂಟ್ರಲ್ ಗೌರ್ನಮೆಂಟಿನವರು ಹಾಕರತಕ್ಕ ಕಂಡಿಶನ್ಸ್ ಎರ್ಲಾ ಇದ್ದರೂ ಕೂಡ ಅದನ್ನು ಮಂಜೂರು ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಈಗ ಮುನ್ನೂರು ರೂಪಾಯಿಗಿಂತ ಹೆಚ್ಚಿಗೆ ಖರ್ಚುಮಾಡಿದರೂ ಸಹ ಯಾವಾಗ ರೈತರು ಅದರ ಮೈಂಟಿನೆನ್ಸ್ ಚಾರ್ಜಸ್ ಕೊಡಲಿಕ್ಕೆ ತಯಾರಿದ್ದಾರೋ, ಎಲ್ಲ ನೀರು ಅನ್ಯಾಯವಾಗಿ ನಷ್ಟವಾಗುತ್ತದೋ, ಅಂಥ ಕಡೆಗಳಲ್ಲಿ ಇದನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಇದುವರೆಗೆ ಹೇಳಿದ್ದು ಎಲ್ಲಾ ಕೇಳಿದೆ. ಸಂತೋಷ. ಈಗ ವ್ಹಾನಿಂಗ್ ಕಮಿಶನ್ ಮೇರೆ ಮತ್ತು ಕೇಂದ್ರ ಸರ್ಕಾರದವರಲ್ಲಿ ಒತ್ತಾಯ ಮಾಡಿ ಎಷ್ಟು ಹಣ ಸ್ಯಾಂಕ್ಷನ್ ಮಾಡುವುದಕ್ಕೆ ಸಾಧ್ಯ? ಅದನ್ನು ಹೇಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲದಕ್ಕೂ ಲಿಮಿಟ್ ಇರಬೇಕು. ನಾವು ಮೂರನೇ ಯೋಜನೆಯಲ್ಲಿ 30 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಎಷ್ಟು ಆತುರತೆ ಇದೆಯೋ ಅಷ್ಟೇ ಆತುರತೆ ಸರ್ಕಾರಕ್ಕೂ ಇದೆ. ಇನ್ನೂ ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯತೆ ಇದೆ ಎಂದು ತಿಳಿದುಕೊಂಡಿದ್ದೇವೆ. ಕೇಂದ್ರ ಸರ್ಕಾರದವರೂ ಸಹ ನಮ್ಮ ರಾಜ್ಯದಲ್ಲಿ ನೀರಾವರಿ ಬಹಳ ಕಡಿಮೆ ಇದೆ ಎಂದು ತಿಳಿದಿದ್ದಾರೆ. ಅಂದಮೇಲೆ ಮೈನರ್ ಇರಿಗೇಶನ್‌ಗೆ ಮುಖ್ಯವಾಗಿ ಹೆಚ್ಚು ಹಣವನ್ನು ಒದಗಿಸಬಹುದೆಂದು ಅದರ ಬಗ್ಗೆ ಯೋಚಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಕೇಂದ್ರ ಸರ್ಕಾರದ ಮಂತ್ರಿಗಳಲ್ಲಿ ಮತ್ತು ಸಂಬಂಧ ಪಟ್ಟವರಲ್ಲಿ ಪ್ರಸ್ತಾಪಮಾಡಿದ್ದಾರೆ. ಅದನ್ನು ಆದಷ್ಟು ಬೇಗ ಕಾರ್ಯಗತ ಮಾಡುತ್ತಾರೆ ಎಂದು ನಾವು ನಂಬಿಕೆ ಇಟ್ಟುಕೊಳ್ಳಬಹುದು.

Sri R. S. HEGDE.—Has it come to the notice of the Government that there are many sweet water rivers in North Kanara and can raise paddy crops at a cost of Rs. 300 per acre ?

Sri ALUR HANUMANTHAPPA.—Yes, sir., the Government relaised it. The Government wish to give facilities to lift irrigation schemes wherever it is possible and feasible.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಲಿಫ್ಟ್ ಇರಿಗೇಶನ್ ಸ್ಕೀಮ್ ನಮ್ಮ ದೇಶಕ್ಕೆ ಹೊಸದು ಎಂದು ಹೇಳಿದ್ದಾರೆ. ಈಗ ಬೇರೆ ಬೇರೆ ವಿಚಾರಗಳ ಬಗ್ಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈಗ ತುಮಕೂರು ಜಿಲ್ಲೆಯಲ್ಲಿ ಎಷ್ಟು ಯೋಜನೆಗಳನ್ನು ಕಳಿಸಿದ್ದಾರೆ, ಅದರಲ್ಲಿ ಎಷ್ಟು ಸ್ಯಾಂಕ್ಷನ್ ಆಗಿದೆ. ಪಿ.ಡಬ್ಲ್ಯು.ಡಿ.ಯವರಿಗೆ ಎಸ್ಟಿಮೇಟ್ ಮಾಡಲು ಆದೇಶ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಯಾವಾಗ ಅದನ್ನು ಜಾರಿಗೆ ಕೊಟ್ಟಿದ್ದಾರೆ ?

ಶ್ರೀ ಆಲೂರು ಹನುಮಂತಪ್ಪ.—ಈಗ ಕಮ್ಯುನಿಟಿ ಇರಿಗೇಶನ್ ಸ್ಕೀಮ್ ಆಗಬೇಕಾದರೆ ನದಿ ಮತ್ತು ವ್ಯಾಲಿ ಏನಿದೆ, ಆ ಪ್ರದೇಶಕ್ಕೆ ಇರೆಕ್ಟ್ರಿಕ್ ಲೈನ್ ಹೋಗಿರಬೇಕು. ಈಗ ನುಮಾರು 8 ಸಾವಿರ ಪಂಪ್‌ಸೆಟ್‌ಗಳನ್ನು ಸರ್ಕಾರ ಹೈರ್ ಪರ್ಚೇಸಿನಲ್ಲಿ ಕೊಟ್ಟಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 23 ಸಾವಿರ ಪಂಪ್ ಸೆಟ್ಟುಗಳಿಗೆ ನರ್ಮಿನ್ ಕೊಟ್ಟಾಗ ಎಷ್ಟೋ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಈ 19 ಜಿಲ್ಲೆಗಳ ಎಲ್ಲಾ ಭಾಗಗಳಲ್ಲೂ ಎಲೆಕ್ಟ್ರಿಕ್ ಲೈನ್ ತೆಗೆದುಕೊಂಡಿದ್ದೇವೆ. ಇದು ಯಾವ ಕಾರಣವಿಂದಲೂ ತಡವಾಗಲಾರದು ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

Sale of Jayadhara and Laxmi Varieties of Cotton Seeds.

*Q.—493. Sri C. S. HULKOTI (Mundargi).—

Will the Government be pleased to state :—

(*a*) the rate of cotton seeds of both Jayadhara and Laxmi varieties that is being sold to the Agriculturists in the District of Dharwar for the purpose of showing during the current year *i.e.* 1965-66 ;

(*b*) on what baisis the said rate is fixed ;

(*c*) which is the authority to fix that rate ;